ಮಾಡಿರಬೇಕು. ಅವನನ್ನು ಹಚ್ಚಿಕೊಂಡಿದ್ದೆ. ನನ್ನ ಊರಿನ ಕಳೆದು ಹೋದ ಪಳೆಯುಳಿಕೆಯಂತೆ... ನನ್ನವನಂತೆ...

ವರ್ಷಗಳೆರೆಡು ಉರುಳಿದವು. ಉಡುಪಿನಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳಾದರೂ ವಿಪರೀತ ಎನಿಸುತ್ತಿರಲಿಲ್ಲ. 'ಪರವಾಗಿಲ್ಲ' ಎನ್ನುವಂತೆ ಇಂಗ್ಲಿಷ್ ಮಾತನಾಡಲಾರಂಭಿಸಿದ. ಉಳಿದವರಂತೆ ಕಪ್ಪೆ ಜಿಗಿತಕ್ಕೆ ಮುಂದಾಗದೇ ನಮ್ಮ ಕಂಪೆನಿಗೇ ಅಂಟಿಕೊಂಡಿದ್ದ. ಆದರೆ ಬೇರೆ ಯಾವ ಮ್ಯಾನೇಜರ್ ಕೈಲೂ ಸೈ ಎನಿಸಿಕೊಳ್ಳಲಿಲ್ಲ. 'ನಿನ್ನ ಶಿಷ್ಯನನ್ನು ನೀನೇ ಇಟ್ಟುಕೋ' ಎಂಬ ಹೇಳಿಕೆಯೊಂದಿಗೆ ರಿಬೌಂಡ್ ಆಗಿ ಬರುತ್ತಿದ್ದ. "ಪ್ರತಿ ಸಲಾನೂ ನನ್ನ ಪ್ರೊಜೆಕ್ಟನ್ಯಾಗ ಹಾಕ್ಕೊಳ್ಳಿಕ್ಕಾಗೂದಿಲ್ಲ. ಅದಕ್ಕ ಸ್ಪೆಸಿಫಿಕೇಷನ್ ಬೇಕಾಗ್ತದ. ಮ್ಯಾಲಿನವರು ಪ್ರಶ್ನೆ ಕೇಳ್ತಾರ. ನೀ ಕಂಪೆನಿಯೊಳಗ ನೆಲಿ ಊರಬೇಕಂದ್ರ ಯಾರ ಬೇಕಾದಾವ್ರ ಕೈಯಾಗ ಕೆಲಸಾ ಮಾಡಬೇಕು' ಎಂಬ ನನ್ನ ಮಾತುಗಳಿಗೆ ವಿಧೇಯನಾಗಿ ತಲೆ ಬಗ್ಗಿಸಿ, 'ಏನರೆ ಮಾಡ್ರಿ ಸರ್, ಇದೊಂದು... ಸಲಾ ನಿಮ್ಮ ಪ್ರೊಜೆಕ್ಟನ್ಯಾಗ ತೊಗೊಂಡುಬಿಡ್ರಿ' ಎಂದು ಗೋಗರೆಯುತ್ತಿದ್ದ. 'ನಿಮ್ಮಂಗ ಕೆಲಸಾ ಯಾರೂ ಹೇಳಿಕೊಡೂದುಲ್ರಿ. ಬರೇ 'ಮಾಡು, ಮಾಡಿ ಮುಗಸು, ಕಂಪ್ಲೀಟ್ ಇಟ್' ಅಂತ ಟಾರ್ಗೆಟ್ ಕೊಡತಾರ' ಎಂದು ದೀನನಾಗುತ್ತಿದ್ದ. ನಾನು ಬೆಣ್ಣೆಯಂತೆ ಕರಗಿ ಹೋಗುತ್ತಿದ್ದೆ. ಮುಂದೆ... ಆರೆಂಟು ತಿಂಗಳೋ, ವರ್ಷವೋ ಅದು ಮುಗಿಯುವವರೆಗೆ ಅವನು ಸುರಕ್ಷಿತವಾಗಿರುತ್ತಿದ್ದ.

ಹೀಗೇ ನಡೆದಿತ್ತು ನಮ್ಮ ಸಾಫ್ಟ್‌ವೇರ್ ಬದುಕು. ಮೇಲಿನಿಂದ ಸುಂದರವಾಗಿ, ಶಾಂತವಾಗಿ ಕಂಡರೂ ಒಳಗೆ ತಳಮಳ, ಕೋಲಾಹಲಗಳ ಆಗರವಾಗಿತ್ತು. 'ಮ್ಯಾನೇಜರ್‌ಗಳು ತೊಂದರೆ ಕೊಡ್ತಾರೆ. ಕೆಲಸ ಹೇಳಿ ಕೊಡದೇ ಬರೀ ಎದೆ ಮೇಲೆ ಕುಳಿತು ಕೆಲಸ ಒಪ್ಪಿಸು ಎನ್ನುತ್ತಾರೆ' ಎಂದು ದೂರುವ ಡೆವಲಪರ್‌ಗಳು, 'ಕೆಲಸ ಮಾಡೋದು ಬಿಟ್ಟು ಬರೀ ವಾಟ್ಸ್‌ಆ್ಯಪ್, ಫೇಸ್‌ಬುಕ್ ನೋಡ್ತಾ ಕಾಲ ಕಳೀತಾರೆ. ಜೋರಾಗಿ ಹೇಳಿದರೆ 'ಮ್ಯಾನೆಜರ್ ಕಿರಿಕ್' ಎಂದು ಕೆಲಸ ಬಿಟ್ಟು ಹೋಗ್ತಾರೆ' ಎಂದು ಗೊಣಗಾಡುವ ಮ್ಯಾನೇಜರ್‌ಗಳು, 'ಏನಾದರೂ ಮಾಡಿಕೊಳ್ಳಿ, ಆದರೆ ಕೆಲಸ ಒಪ್ಪಿಸಿ' ಎನ್ನುವ ಸೀನಿಯರ್ ಮ್ಯಾನೇಜ್‌ಮೆಂಟ್, 'ಬೇರೆಲ್ಲಾ ಹೇಳಬೇಡಿ. ಆರ್ಡರ್ಸ್ ತನ್ನಿ. ಪ್ರೊಜೆಕ್ಟ್ ಮುಗಿಸಿ ಬಿಲ್ಲಿಂಗ್ ಮಾಡಿ' ಎಂದು ಆದೇಶಿಸುವ ವೈಸ್ ಪ್ರಸಿಡೆಂಟ್, ಸಿ.ಇ.ಓ ಗಳು, ಇವರೆಲ್ಲರ ನಡುವೆ ನಾನು ಮಿಡಲ್ ಮ್ಯಾನೇಜ್‌ಮೆಂಟ್‌ನಲ್ಲಿ ಕುಳಿತು ಒದ್ದಾಡ್ತಾ ಇದ್ದೆ. ಜೊತೆಗೆ ಖಾನಾಪುರದ ರಾಜೇಶನ ಕಿರಿಕಿರಿಯೂ ಸೇರಿಕೊಂಡಿತ್ತು.

ಆಗಲೇ ನನಗೆ ಗೋಪಣ್ಣ ಮಾಮಾನ ಫೋನ್ ಬಂದಿದ್ದು. "ಈ ಆದಿತ್ಯವಾರ ಸಂಧ್ಯಾನ್ನ ನೋಡಲಿಕ್ಕೆ ವರನ ಕಡೆಯವ್ರು ಬರ್ತಾರ. ಎಲ್ಲಾ ರೀತಿಯಿಂದಲೂ ಸಂಬಂಧ ಛೊಲೊ ಅನಸ್ತದ. ನೀ ಒಮ್ಮೆ ಬಂದ ನೋಡಿದ್ರ ನಮಗ ಸಮಾಧಾನ ಆಗ್ತದ" ಎನ್ನುತ್ತಲೇ ದೀರ್ಘವಾಗಿ ವರನ ಬಗ್ಗೆ, ಅವರಪ್ಪನ ಬಗ್ಗೆ ಮಾತನಾಡಿದ. ಆದರೆ ಎರಡೇ ದಿನಗಳಲ್ಲಿ ಬೆಳಗಾವಿ ಎಂದರೆ ನನಗೆ ಪುಕು, ಪುಕು ಆರಂಭವಾಯಿತು. ಬಸ್ ಪ್ರಯಾಣ ನನಗಾಗುವದಿಲ್ಲ. ಟ್ರಾವೆಲಿಂಗ್ ಸಿಕನೆಸ್ ಹಿಂಡಿ ಹಾಕುತ್ತಿತ್ತು. ರೈಲು ಸಿಗುವ ಸಾಧ್ಯತೆ ಇಲ್ಲ. ಹಾಗೆಂದು ಎಷ್ಟೆಲ್ಲ ಸಹಾಯ ಮಾಡಿದ ಮಾವನ ಅಗತ್ಯ ಸಮಯದಲ್ಲಿ ನಾನು ಹೋಗದೇ ಇದ್ದರೆ ಮಹಾಪರಾಧವಾಗುತ್ತದೆ. ಹೌದು, ಅಪ್ಪ ಬೇಗನೇ ತೀರಿ ಹೋದ ಮೇಲೆ ನಮಗೆ ಬೆನ್ನೆಲುಬಾಗಿ ನಿಂತವನೇ ಗೋಪಣ್ಣ ಮಾಮಾ. ಬರೀ ಹಣದ ಸಹಾಯವಷ್ಟೇ ಅಲ್ಲದೇ ಸಾಕಷ್ಟು